**ಪಿಡಬ್ಲ್ಯೂ-1**

**ದಿನಾಂಕ 14.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟಿ ಸವಾಲು 13 ನೇ ಪ್ರತಿವಾದಿಯ ಪರ ಶ್ರೀ. ಸಿ ಎಸ್ ಎಸ್ **ವಕೀಲರವರಿಂದಃ**

ನಾನು 8 ನೇ ತರಗತಿವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನನ್ನ ತಂದೆಯಾದ ಜವರೇಗೌಡರಿಗೆ ಇಬ್ಬರು ಹೆಂಡತಿಯರು. 1 ನೇ ಹೆಂಡತಿ ಹೆಸರು ದೇವಮ್ಮ, 2 ನೇ ಹೆಂಡತಿ ಹೆಸರು ದೇವಮ್ಮ. 1 ನೇ ಹೆಂಡತಿಗೆ 3 ಜನ ಮಕ್ಕಳು. ಅವರ ಹೆಸರುಗಳು 1. ದೇವೇಗೌಡ 2. ಸುಬ್ಬೇಗೌಡ 3. ಶಿವಣ್ಣೇಗೌಡ. ಸುಬ್ಬೇಗೌಡರಿಗೆ ಇಬ್ಬರು ಹೆಂಡತಿಯರು. 1. ಜಯಲಕ್ಷ್ಮಮ್ಮ 2. ಜಯಮ್ಮ. ಸುಬ್ಬೇಗೌಡರ 1 ನೇ ಹೆಂಡತಿಯಾದ ಜಯಲಕ್ಷ್ಮಮ್ಮನವರಿಗೆ ಇಬ್ಬರು ಮಕ್ಕಳು, ಹೆಣ್ಣು ಮಗಳು ಮೃತ ಹೊಂದಿರುತ್ತಾರೆ.

ಆಕೆಗೆ ಮದುವೆಯಾಗಿ ಮಕ್ಕಳು ಇರುತ್ತಾರೆ. ಸದರಿಯವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸುಬ್ಬೇಗೌಡರ 2 ನೇ ಹೆಂಡತಿಯಾದ ಜಯಮ್ಮನಿಗೆ ಇಬ್ಬರು ಮಕ್ಕಳು. ಅವರ ಹೆಸರುಗಳು ನನಗೆ ಗೊತ್ತಿಲ್ಲ, ಅವರು ನಮ್ಮ ಸಂಪರ್ಕದಲ್ಲಿ ಇರುವುದಿಲ್ಲ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

2. 5 ನೇ ಪ್ರತಿವಾದಿ 1 ವರ್ಷದ ಹಿಂದೆ ಮೃತಪಟ್ಟಿರುತ್ತಾರೆ, ಸದರಿಯವರ ವಂಶಸ್ಥರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. 5 ನೇ ಪ್ರತಿವಾದಿ ಕುಟುಂಬದವರು ದೇವಮ್ಮ ಮತ್ತು ಶಿವಣ್ಣಗೌಡ, ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಶಿವಣ್ಣಗೌಡನಿಗೆ 3 ಜನ ಮಕ್ಕಳು. ಸದರಿಯವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

3. ನನ್ನ ಅಣ್ಣನಾದ ನಾಗಣ್ಣ 8 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಸದರಿಯವರಿಗೆ ಇಬ್ಬರು ಮಕ್ಕಳು. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಆತನ ಹೆಂಡತಿಯನ್ನು 6 ನೇ ಪ್ರತಿವಾದಿಯಾಗಿ ಈ ದಾವೆಯಲ್ಲಿ ಸೇರಿಸಿರುತ್ತೇನೆ.

ಮುಂದುವರಿದ ಪಾಟಿ ಸವಾಲಿಗೆ ಸಮಯಾವಕಾಶ ನೀಡಲಾಗಿದೆ

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ, ಪಾಂಡವಪುರ.